## ಶ್ರೀವ್ಯಾಸರಾಜತೀರ್ಥ ವಿರಚಿತ ನಾರಾಯಣ ವರ್ಮ

ಸರ್ವದೇಶದಲ್ಲೇ ಶ್ರೀಹರಿ ನಮ್ಮನ್ನು ರಕ್ಷಿಸೋ –
ಜಲದಲ್ಲಿ ಮತ್ಸ್ಯಾವತಾರನಾಗಿ

ಸ್ಥಳದಲ್ಲಿ ವಾಮನನಾಗಿ ರಕ್ಷಿಸೋ ನಿನ್ನ ಭಕ್ತರನ್ನು –
ಆಕಾಶದಲ್ಲಿ ತ್ರಿವಿಕ್ರಮನಾಗಿ ರಕ್ಷಿಸೋ ।

ಭಯಗಳಲ್ಲಿ ನಾರಸಿಂಹನಾಗಿ –
ಮಾರ್ಗದಲ್ಲಿ ವರಾಹನಾಗಿ ರಕ್ಷಿಸೋ ನಿನ್ನ ಭಕ್ತರನ್ನು

ಪರ್ವತಾಗ್ರದಲ್ಲಿ ಪರಶುರಾಮನಾಗಿ ರಕ್ಷಿಸೋ –
ವನವಾಸದಲ್ಲಿ ರಾಮಚಂದ್ರನಾಗಿ ।

ಕರ್ಮಬಂಧಂಗಳ ಕಳೆದು ರಕ್ಷಿಸೋ ನಮ್ಮ ಕಪಿಲಮೂರ್ತಿ –

ಕಾವೇಶದಲ್ಲಿ ಸನತ್ಕುಮಾರನಾಗಿ ರಕ್ಷಿಸೋ –
ದುರ್ಮಾರ್ಗದಲ್ಲಿ ಹಯಗ್ರೀವನಾಗಿ
ಅನ್ಯದೇವತೆ ಪೂಜಾ ಅಲ್ಲೇ ರಕ್ಷಿಸೋ ನಮ್ಮ ಮಹಿದಾಸ

ಪಾಷಂಡಮತದಲ್ಲಿ ಬೌದ್ಧನಾಗಿ ರಕ್ಷಿಸೋ –
ಅನ್ಯ ದೂತಣೆ ಅವತರಿಸಿ ನಮ್ಮ ದುಂದುಭಿಯಾದಿಂದಲಿ ರಕ್ಷಿಸೋ
ನಮ್ಮ ಶ್ರೀವಿಶ್ವಮೂರ್ತಿ ನರಕಗಳಿಂದಲಿ ಕೂರ್ಮನಾಗಿ ರಕ್ಷಿಸೋ

ಆಪತ್ತುಗಳಿಗೆ ಧನ್ವಂತ್ರಿಯಾಗಿ ಕಲಿಯುಗ ಕಲ್ಮಶ ರಕ್ಷಿಸೋ –
ನಮ್ಮ ಕಲ್ಕಿ ಮೂರ್ತಿ –

ಪ್ರಾತ:ಕಾಲದಲ್ಲಿ ಕೇಶವ ನಮ್ಮನ್ನು ರಕ್ಷಿಸೋ –

ಸಂಧ್ಯಾಕಾಲದಲ್ಲಿ ವಿಷ್ಣು ನಮ್ಮ ರಕ್ಷಿಸೋ –

ಸಂಗಮದಲಿ ಗೋವಿಂದನಾಗಿ –

ಸಾಯಂಕಾಲದಲ್ಲಿ ರಕ್ಷಿಸೋ – ನಮ್ಮ ಶ್ರೀಧರನಾಗಿ

ಪೂರ್ವಕಾಲದಲ್ಲಿ ಹೃಷೀಕೇಶ ನಮ್ಮನ್ನು ರಕ್ಷಿಸೋ –

ನಿಶಾಕಾಲದಲ್ಲಿ ಪದ್ಮನಾಭನಾಗಿ

ಅಪರಾತ್ರಿ ಕಾಲದಲ್ಲಿ ರಕ್ಷಿಸೋ – ನಮ್ಮ ಶ್ರೀ ವಿಶ್ವಮೂರ್ತಿ

ಉಷ:ಕಾಲದಲ್ಲಿ ಜನಾರ್ಧನನಾಗಿ ರಕ್ಷಿಸೋ –

ಸಕಲ ಕಾಲವು ಸಂಧಿಸಿ ಶ್ರೀ ಹರಿ ನಿಮ್ಮ ಚಕ್ರವು

ಅತಿ ಶಾಲಪ್ರಭೆಯಂತೆ ಪ್ರಳಯಕಾಲದ ಅಗ್ನಿಯಂತೆ

ಈ ಮೂರು ಷಡವ್ಯೆದು ಸೈನ್ಯಗಳ ಅಗ್ನಿವಾಯು ಒಡಗೂಡಿ ತೃಣವ

ಸುಡುವಂತೆ ಭೂತಗಂಧರ್ವರ ಪೂಷಾಂಡವ ಕೆಡಸಿ

ನಮ್ಮ ಸಲಹುದೆನುತ ವಿಷ್ಣು ಶಂಖವೇ ನಿಮ್ಮ ಧ್ವನಿ ಕೇಳಿ

ರಾಕ್ಷಸರು ಭಯಬಿಡಿಸಿ ಎದೆಯೊಡೆಸಿ ಲಯವನ್ನು ಮಾಡಿ

ವಿಷ್ಣು ಗಜೇಂದ್ರ ರಾಕ್ಷಸರ ಕಡೆದು ಚೂರ್ಣವ ಮಾಡಿ

ಕಿವಿಗಳಂತುದುರಿಸಿ ಭೂಮಿಯಲ್ಲೇ ಅವತರಿಸಿ

ವೈಷ್ಣವ ಸುಜನರನು ಸಲಹೆಂದು ನಿಮ್ಮ ಪ್ರಾರ್ಥನೆಯ ನಾ ಮಾಡಿದೆ

ಸಾಮವೇದಕೆ ಭೀಮನಾದ ಗರುಡಗೆ ಸಲಹುವನು

ನಮ್ಮ ಪ್ರಾಣಾಂಗ ಭೂಮಿ ದಿಕ್ಕು ದಿಕ್ಕಿಗೆ ನಾರಸಿಂಹ ಮೂರುತಿಯಾಗಿ

ತಾ ಒಳ ಹೊರಗೆ ವ್ಯಾಪಕನು ಆಗಿ

ಶ್ರೀಹರಿ ಇದ್ದು ರಕ್ಷಿಸಲಿ ಘೋರ ದುರಿತಗಳೆಲ್ಲ

ಓಡುತಿರಲಿ ಅಂದಾಪರಿಯಲಿ ಸರ್ವವ್ಯಾಪಕನು ಆಗಿ ರಕ್ಷಿಸೋ

ಎಲ್ಲಾ ಪರಿಯಿಂದ ಭಕ್ತರನ್ನು ನೆನೆಯೆ ಮಧ್ವಗುರು ಅಂತರ್ಯಾಮಿ,

ನಮ್ಮ ಶ್ರೀಮದಾನಂದತೀರ್ಥರನು ಸುಪ್ವಿ ಸರ್ವೋತ್ತಮನೆ –

ಸುಪ್ವಿ ವಿಶ್ವರೂಪನೆ – ಸುಪ್ವಿ ನಮ್ಮ ಶ್ರೀಮದನಂತಾವತಾರಗಳಿಗೆ

ಸುಪ್ವಿ ಎಂದು ಪಾಡಿ ಸುಖಿಯಾದ – ಜಮದಗ್ನಿ ವತ್ಸಲ ಭೃಗುರಾಮ

ಭೂಮಿ ಜಲದಲ ಜಯ ಶ್ರೀರಾಮ ಜಾನಕಿ ವಲ್ಲಭ

ದಶರಥ ರಾಮ ರಾಮ ನಾಮಕ್ಕಿಂತ ಇನ್ನ್ಯಾವುದೂ ಸರಿಯಿಲ್ಲವೆಂದು

ಮೊರೆ ಹೊಕ್ಕೆನು ಶ್ರೀಹರಿಯೇ ಮುಕ್ತಿ ಬಲವಂತ

ಮುಕ್ತಿ ಗೋವಿಂದ ಕಾಮಧೇನು ಕಲ್ಪತರು ಗೋವಿಂದ

ನಾಮೋಚ್ಚಾರಣ ಪರಮಾತ್ಮ ಗೋವಿಂದ ಸ್ಮೃತಿತತಿಗಳ ಕೊಂಡಾಡುವೆ

ಹರೇ ನಾರಾಯಣ ಪುರಾಣ ಪುರುಷೋತ್ತಮ

ಆದಿನಾರಾಯನ ಮಂತ್ರವೊಂದೆ ಅಂಬರೀಷನ ಮರಿಕಾಯ್ದಿತ್ತು

ಈ ಮಂತ್ರ ತುಂಬುರು ನಾರದರಿಗೆ ಶ್ರೀಕೃಷ್ಣಮಂತ್ರ

ಶಂಭು ನಾರಿಪಿತನ ಸಲಹಿತು

ಈ ಮಂತ್ರ ಮುಕ್ತಿ ಬಯಸುವರಿಗೆ **ಶ್ರೀಕೃಷ್ಣ**ಮಂತ್ರ ॥

## ಶ್ರೀವಾದಿರಾಜ ಶ್ರೀಪಾದಂಗಳವರಿಂದ ವಿರಚಿತ ನಾರಾಯಣವರ್ಮ

ಸಕಲ ಋಷಿಗಳಲ್ಲಿ ಹರಿ ನಮ್ಮ ಸ್ವಾಮಿಯಾಗಿ ರಕ್ಷಿಸು
ಆಲದಲಿ ಮತ್ಸ್ಯಾವತಾರನಾಗಿ

ಸ್ಥಳದಲ್ಲಿ ವಾಮನನಾಗಿ ರಕ್ಷಿಸು ನಿಮ್ಮ ನೆನೆವರಾ –
ಆಕಾಶದಲಿ ತ್ರಿವಿಕ್ರಮನಾಗಿ ರಕ್ಷಿಸು
ಭಯಗಳಲ್ಲಿ ನಾರಸಿಂಹನಾಗಿ

ಮಾರ್ಗದಲ್ಲಿ ವರಾಹನಾಗಿ ರಕ್ಷಿಸು ನಿಮ್ಮ ನೆನೆವರ –
ಆಶ್ರಯದಲ್ಲಿ ನರನಾರಾಯಣನಾಗಿ ರಕ್ಷಿಸು

ಅಯೋಗ್ಯರಲ್ಲಿ ದತ್ತಾತ್ರೇಯನಾಗಿ ರಕ್ಷಿಸು –
ಕರ್ಮಬಂಧಗಳೆಲ್ಲ ಕಳೆದು ರಕ್ಷಿಸು ಕಪಿಲಮೂರ್ತಿಯಾಗಿ
ಪ್ರಾತ:ಕಾಲದಲ್ಲಿ ಕೇಶವ ನಮ್ಮ ರಕ್ಷಿಸು
ಸಾಯಂಕಾಲದಲ್ಲಿ ಗೋವಿಂದ ನಮ್ಮ ರಕ್ಷಿಸು
ವಿಪತ್ತಿನಿಂದ ಧನ್ವಂತರಿ ರಕ್ಷಿಸು
ಅನ್ಯದೇವತೆ ಭಜನೆ ಕಳೆದು ರಕ್ಷಿಸಯ್ಯ
ಶ್ರೀಕೃಷ್ಣಮೂರುತಿಯಾಗಿ ಅಜ್ಞಾನವಿಷಯಗಳ ಕಳೆದು ರಕ್ಷಿಸು
ವೇದವ್ಯಾಸಮೂರ್ತಿಯಾಗಿ ಕೃಷ್ಣನ ಶಂಖವೆ
ನಿಮ್ಮ ಧನಿದುರಿ ರಾಕ್ಷಸರ ಎದೆ ಒಡೆಸಿ,
ಭಯಬಿಡಿಸಿ ಲಯವನೆ ಮಾಡಿಸಿ
ಪೂತಗಂಧರ್ವರು ಕೂಷ್ಮಾಂಡ ತೋರಿಸಲು
ವಿಷ್ಣುಗದೆ ರಾಕ್ಷಸರು ಒಡೆದು ಚೂರ್ಣವ ಮಾಡಿ
ಕಿಡಿಗಳಂತೆ ಭೂಮಿ ಮೇಲೆ ಆಧರಿಸಿ
ಶತಚಂದ್ರಪ್ರಭೆಯಂತೆ ಹೊಳೆವ ಹರಿಯು
ನಮ್ಮ ಮತಿವಂತರು ವೈರಿಗಳ ಕಣ್ಣಿಗೆ ಕಾಣಬಾರದು
ಮಾಡಿತೋರಿಸಿ ತಮ್ಮ ದಿವ್ಯ ತೇಜಗಳ
ಧರ್ಮವಿಷಯದಲಿ ಹಯಗ್ರೀವನಾಗಿ ರಕ್ಷಿಸು
ಮಧ್ಯಾಹ್ನ ಕಾಲದಲಿ ಮಧುಸೂಧನನಾಗಿ

ಸಾಯಂಕಾಲದಲಿ ಶ್ರೀವತ್ಸಮೂರ್ತಿಯಾಗಿ
ಸಾಮವೇದಕೆ ಅಭಿಮಾನಿಯಾದ ಗರುಡವಾಹನನೆ
ಸಲಹೆನ್ನ ವಿಷದ ಭಯಗಳ ಬಿಡಿಸಿ
ಕೃಷ್ಣ ಮುಕುಟಧರನೆ ರಕ್ಷಿಸೋ
ನಮ್ಮ ಪ್ರಾಣೇಂದ್ರಿಯದಿಂದ ಬುದ್ಧಿಯಿಂದ
ದಿಕ್ಕು ದಿಕ್ಕುಗಳಲ್ಲಿ ನಾರಸಿಂಹಮೂರ್ತಿಯಾಗಿ
ನಾರಸಿಂಹ ನಾದಗಳಿಂದ ಎಲ್ಲ ಪರಿಯಿಂದ ಭಕ್ತರನೆಲ್ಲ
ನರಹರಿ ಇದ್ದು ರಕ್ಷಿಸೂ
ಗುರುಮಧ್ವರಾಯರ ಗುರು ವಿಶ್ವ ವ್ಯಾಪಕರ
ಸುವಿಷ್ಣು ವಿಷ್ಣುವರ ಮಗನಂತೆ ನಿಮ್ಮ ಸುನಾಮ
ಎಂದು ಪಾಡಿ ಸುಖಿಯಾಗಿ ಜಮದಗ್ನಿವರದ
ಪ್ರಹ್ಲಾದ ವರದ ಅಸುರರ ಗೆಲಿದ
ಬಲರಾಮ ಜಾನಕೀವಲ್ಲಭ ಜಯ ಜಯರಾಮ
ನಿತ್ಯ ವೈಕುಂಠ ನಿಜ ಗೋವಿಂದ
ಅಂಬರೀಷರಾಯಗೆ ವರಗಳ ಕೊಟ್ಟ
ನಂಬಿದ ಭಕ್ತರಿಗೆ ಅಭಯಕೊಟ್ಟ
ಯಶೋದೆಯ ಮನ ಉದ್ಧರಿಸಿದ
**ಹಯವದನ ರಕ್ಷಿಸು**